ಅಧ್ಯಕ್ಷರು: 21ನೇ ಪಟ್ಟಿಯಲ್ಲಿದ್ದ 55 ಪ್ರಶ್ನೆ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾಗುವ ವಿಷಯಗಳು.

ವಿಷಯ: ಆಲಮಟ್ಟಿ ಅಣೆಕಟ್ಟಿನ ಎತ್ತರದ ಬಗ್ಗೆ ಸುಪ್ರೀಂಕೋರ್ಟ್ ಜಡ್ಜಮೆಂಟಿನ ವಿಚಾರ.

ಶ್ರೀ ಪಿ.ಜಿ.ಆರ್.ಸಿಂಧ್ಯ: (ಕನಕಪುರ) ಮಾನ್ಯ ಅಧ್ಯಕ್ಷರೇ, ನಾನು ಒಂದು ಪ್ರಮುಖವಾದ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಮತ್ತು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ಮತ್ತು ಬಹಳ ಗಹನವಾದ ವಿಚಾರವನ್ನು ಈ ಸಂದರ್ಭದಲ್ಲಿ ತಮ್ಮ ಅನುಮತಿಯೊಂದಿಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ನಿನ್ನೆ ದಿನ ಸುಪ್ರೀಂ ಕೋರ್ಟಿನವರು ಆಲಮಟ್ಟಿ ಜಲಾಶಯದ ವಿವಾದದ ಬಗ್ಗೆ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಆ ತೀರ್ಪಿನಲ್ಲಿ 519.6 ಮೀಟರ್‌ವರೆಗೆ ಆಲಮಟ್ಟಿ ಅಣೆಕಟ್ಟಿನ ಮೇಲೆ ನಮ್ಮ ಸ್ಕಿನ್ ಪ್ಲೇಟ್‌ಗಳನ್ನು ಹಾಕಬಹುದು, ಅದಾದ ಮೇಲೆ ಹಾಕುವುದಕ್ಕೆ ನಿಮಗೆ ಅವಕಾಶ ಇಲ್ಲವೆಂಬ ಮಾತನ್ನು ಹೇಳಿದ್ದಾರೆ. ನಂತರ ಟ್ರಿಬ್ಯುನಲ್ ಮಾಡಬೇಕೆಂಬ ವಿಚಾರ ಮತ್ತು ಇನ್ನೂ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಹನ್ನೆರಡೂವರೆ - ಒಂದು ಗಂಟೆಯ ವೇಳೆಗೆ ಆ ತೀರ್ಪು ಬಂತು. ಅದು ಬಂದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಹೇಳಿದರು. ನಾನು ಎಲ್ಲಾ ಪಕ್ಷಗಳ ಸಭೆಯನ್ನು ಕರೆಯುತ್ತೇನೆ. ಸಭೆಯನ್ನು ಕರೆದು ಅದಾದ ನಂತರ ನಾನು ಚರ್ಚೆಯನ್ನು ಮಾಡುತ್ತೇನೆ. ತಕ್ಷಣ ಈಗ ಸಮಯದ ಅಭಾವ ಇರುವುದರಿಂದಾಗಿ ಸ್ಕಿನ್ ಪ್ಲೇಟ್‌ಗಳನ್ನು ಹಾಕಲಿಕ್ಕೆ 519.6 ಅಡಿ ಎತ್ತರದವರೆಗೆ ನೀರು ನಿಂತುಕೊಳ್ಳುವುದಕ್ಕೆ ಅನುಕೂಲವಾಗಲು ನಾನು ಸೂಚನೆಯನ್ನು ಕೊಟ್ಟಿದ್ದೇನೆಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅದಾದ ನಂತರ, ನಾನು ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿ ಕೊಂಡೆ. ಇದನ್ನು ಆದಷ್ಟು 2-3 ದಿನಗಳಲ್ಲಿ ವಿರೋಧ ಪಕ್ಷದ ಎಲ್ಲಾ ಮುಖಂಡರುಗಳು ಮತ್ತು ನೀರಾವರಿ ತಜ್ಞರುಗಳ ಹಾಗೂ ಮಾಜಿ ಮುಖ್ಯಮಂತ್ರಿಗಳ ಮತ್ತು ನಮ್ಮ ಪರವಾಗಿ ವಾದ ಮಾಡುತ್ತಿರತಕ್ಕ ವಕೀಲರುಗಳು ಯಾರಿದ್ದಾರೆ, ಅವರನ್ನು ಕರೆಸಿ, ಇದು ಬಹಳ ಮಹತ್ವವಾಗಿರತಕ್ಕ ವಿಚಾರ. ಇದರ ಬಗ್ಗೆ ಇದುವರೆಗೂ ಸಹಿತ ಭಾರತೀಯ ಜನತಾಪಾರ್ಟಿಯವರಾಗಲೀ, ಜನತಾ ದಳದವರಾಗಲೀ ಕಾಂಗ್ರೆಸ್‌ನವರಾಗಲೀ ನಾವು ಪಕ್ಷಭೇದವನ್ನು ಮಾಡಿಲ್ಲ. ಅದಕ್ಕಾಗಿ ನಾವು ಇದರ ಬಗ್ಗೆ ಪಕ್ಷಾತೀತವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳೋಣ ಎಂಬ ಮಾತನ್ನು ಹೇಳಿದ್ದೆ. ಈ ಮಧ್ಯದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳಾದ ಶ್ರೀಮಾನ್ ಹೆಚ್.ಕೆ.ಪಾಟೀಲರು, "Today expressed his pleasure over the Supreme Court

Judgement on the height of Almatti Dam as it has vindicated the Karnataka's stand on the various aspects of Krishna Water dispute with Andhra Pradesh" ಸುಪ್ರೀಂಕೋರ್ಟ್‌ನವರು ಕರ್ನಾಟಕದ ತೀರ್ಮಾನವನ್ನು ಒಪ್ಪಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಕರ್ನಾಟಕದ ಎಲ್ಲಾ ಪಕ್ಷಗಳ, ಕರ್ನಾಟಕದ ಜನತೆಯ ತೀರ್ಮಾನ 519.6 ಮೀಟರ್ ಅಲ್ಲ. ಅದು 524 ಮೀಟರ್, ಇದು ಮೊದಲನೆಯದು. ಇದಾದ ನಂತರ ಬೇರೆ ಬೇರೆ ಪಕ್ಷದವರು ಇದರ ಬಗ್ಗೆ ಪ್ರತಿಕ್ರಿಯೆ ವ್ಯಕ್ತಮಾಡಿದ್ದಾರೆ. ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾದ ಶ್ರೀಮಾನ್ ಯಡಿಯೂರಪ್ಪನವರು ಇದನ್ನು ಸ್ವಾಗತ ಮಾಡಿದ್ದಾರೆ. ಮುಖ್ಯಮಂತ್ರಿಗಳು ನಿನ್ನೆ, ತಕ್ಷಣ ಸಮಯದ ಅಭಾವವಿರುವುದಾಗಿ ಸ್ಕಿನ್ ಪ್ಲೇಟ್‌ಗಳನ್ನು 519.6 ಮೀಟರ್‌ಗೆ ನಿಲ್ಲಿಸಲಿಕ್ಕೆ ನಾವು ಈಗಾಗಲೇ ಸೂಚನೆಯನ್ನು ಕಳುಹಿಸಿದ್ದೇನೆಂದು ಹೇಳಿದರು. ಅದೊಂದು ಒಳ್ಳೆಯ ಕ್ರಮ. ಇದಾದ ಮೇಲೆ ಬಂದಿರತಕ್ಕ ಪ್ರಶ್ನೆ ಏನೆಂದರೆ, ಆಂಧ್ರ ಪ್ರದೇಶದ ಮುಖ್ಯ ಮಂತ್ರಿಗಳೂ ಸಹಿತ ಇದನ್ನು ಸ್ವಾಗತ ಮಾಡಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಬಹಿರಂಗವಾದ ಹೇಳಿಕೆಯನ್ನು ಇದುವರೆಗೂ ಕೊಟ್ಟಿಲ್ಲ. ಸುಪ್ರೀಂಕೋರ್ಟಿನ ಜಡ್ಜ್‌ಮೆಂಟಿನ ಬಗ್ಗೆ ಸಂತೋಷ ಅಥವಾ ಅಸಂತೋಷ, ಎರಡನ್ನೂ ಸಹಿತ ಎಕ್ಸ್‌ಪ್ರೆಸ್ ಮಾಡಿಲ್ಲ. ನೀರಾವರಿ ಮಂತ್ರಿಗಳು ಈಗಾಗಲೇ ಎಕ್ಸ್‌ಪ್ರೆಸ್ ಮಾಡಿ, ಇದನ್ನು ಸ್ವಾಗತ ಮಾಡಿದ್ದಾರೆ. ಇದನ್ನು ಏಕೆ ಸ್ವಾಗತ ಮಾಡಿದರು ಎಂಬುದು ನಮಗೆ ಗೊತ್ತಾಗಿಲ್ಲ. ಏಕೆಂದರೆ, this House, and as all political parties we should take one stand on this issue. ಇದು ಬಹಳ ಮಾಹತ್ವಾಗಿರತಕ್ಕ ವಿಚಾರ. ಈ ಸಮಯದಲ್ಲಿ ಪತ್ರಿಕೆಗಳಲ್ಲಿ ವರದಿಯಾಗಿರತಕ್ಕಂಥಾದ್ದು ನಮ್ಮ ಪರವಾಗಿ ವಾದವನ್ನು ಮಾಡತಕ್ಕ ವಕೀಲರಾದ ನಾರಿಮನ್‌ರೂ ಸಹಿತ ಸುಪ್ರೀಂಕೋರ್ಟ್ ಕೊಟ್ಟಿರತಕ್ಕ ತೀರ್ಪನ್ನು ಸ್ವಾಗತ ಮಾಡಿದ್ದಾರೆ. ಅದರಿಂದಾಗಿ ನಮಗೇನು ಸಂಶಯ ಬರುತ್ತಾ ಇದೆ. ಒಂದು ಕಡೆ ಉತ್ತರ ಕರ್ನಾಟಕದಲ್ಲಿರತಕ್ಕ ಜನ 524 ಮೀಟರ್ ಎತ್ತರ ಆಗಲೇಬೇಕೆಂಬ ಮಾತನ್ನು ಹೇಳುತ್ತಿದ್ದಾರೆ. ಈಗ ತಾವೇನು ಹೇಳಿದ್ದೀರಿ 519.6 ಮೀಟರ್‌ಗೆ ನಾವು ಸ್ಕಿನ್ ಪ್ಲೇಟ್‌ಗಳನ್ನು ಅಳವಡಿಸುವ ಕೆಲಸವನ್ನು ಮಾಡಿದ್ದೇವೆ ಎಂದು ಹೇಳಿದಿರಿ. ತಮಗೆ ಗೊತ್ತಿರುವ ಹಾಗೆ 1998ರಲ್ಲಿ ಸುಪ್ರೀಂಕೋರ್ಟಿನವರು ಒಂದು ಇಂಟೀರಿಯಮ್ ಆರ್ಡರನ್ನು ಪಾಸ್ ಮಾಡಿದ್ದಾರೆ. ಆ ಸಂದರ್ಭದಲ್ಲಿ ಗರ್ಡರ್ ಬಗ್ಗೆ, ಫ್ಲೇಮ್‌ವರ್ಕ್ಸ್ ಬಗ್ಗೆ, ಸ್ಕಿನ್ ಪ್ಲೇಟ್ ಬಗ್ಗೆ ಇವೆಲ್ಲವನ್ನೂ ಹೇಳಿ, 509 ಮೀಟರ್‌ವರೆಗೆ ನೀವು ನಿಲ್ಲಿಸಿಕೊಳ್ಳಬಹುದು ಎಂಬ ಮಾತನ್ನು ಸಹಿತ ಅವರು ಹೇಳಿದ್ದಾರೆ. ಅಧ್ಯಕ್ಷರೇ, ಇಲ್ಲಿ ಬಹಳ ಮುಖ್ಯವಾಗಿ ನಾವೆಲ್ಲಾ ಗಮನಿಸಬೇಕಾಗಿರುವುದು, 519ಕ್ಕೂ 524ಕ್ಕೂ ಇರತಕ್ಕ ವ್ಯತ್ಯಾಸ ಏನಿದೆ, ಸುಮಾರು 175 ಟಿ.ಎಂ.ಸಿ.ವಾಟರ್. 125 ಟಿ.ಎಂ.ಸಿ. ವಾಟರ್ ನೀವು 519 ಮೀಟರ್‌ಗೆ ನೀರನ್ನು ನಿಲ್ಲಿಸಿದಾಗ, ಆ ನೀರು ನುಗ್ಗಿದಾಗ ಟೆಕ್ನಿಕಲಿ ಮತ್ತು ಹೈಡ್ರಲಾಜಿಕಲಿ ಏನಾಗುತ್ತದೆ ಎಂಬುದನ್ನು ಸಹಿತ ತಾವು ತಕ್ಷಣ ವಿಮರ್ಶೆ

ಮಾಡಬೇಕು, ಮತ್ತು ಈ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ತಾವು, ನೀರಾವರಿ ತಜ್ಞರುಗಳನ್ನು ಕಳುಹಿಸಿ, ಇದನ್ನು ಮಾಡುವುದು ಸರಿ ಎಂಬುದಾಗಿದೆ. ಇನ್ನೊಂದು ಏನೆಂದರೆ, ಕಾವೇರಿ ರಿವರ್ ಅಥಾರಿಟಿಯನ್ನು ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಎನ್‌ಫೋರ್ಸ್ ಮಾಡಿದರು. ಯಾವುದಾದರೂ ಟ್ರಿಬ್ಯುನಲ್ ಆರ್ಡರನ್ನು ಕೊಟ್ಟರೆ, ಅದನ್ನು ಎನ್‌ಫೋರ್ಸ್ ಮಾಡಲಿಕ್ಕೆ ಕಾವೇರಿ ಟ್ರಿಬ್ಯುನಲ್ ಮಾಡಿದರು. ಹಾಗೆಯೇ ಕೃಷ್ಣಾ ರಿವರ್ ಅಥಾರಿಟಿಯನ್ನು ಮಾಡುವ ಬಗ್ಗೆ ನಾವು ಆಗ್ರಹಪಡಿಸಬೇಕೇ ಎಂಬುದನ್ನು ಸಹಿತ ವಿಮರ್ಶೆ ಮಾಡತಕ್ಕಂತಾದ್ದು ಅವಶ್ಯಕತೆ ಇದೆ. ಈ ಸಂದರ್ಭದಲ್ಲಿ ಸುಪ್ರೀಂಕೋರ್ಟಿನವರು ಹೇಳಿರತಕ್ಕಂತಾದ್ದು ಪತ್ರಿಕೆಗಳ ವರದಿ ಪ್ರಕಾರವಾಗಿ ಇದನ್ನು ಸಂಪೂರ್ಣವಾಗಿ ರಿವ್ಯೂ ಮಾಡಬೇಕೆಂಬ ಮಾತು ಸಹಿತ ಎಲ್ಲೋ ಒಂದು ಕಡೆ ಬರುತ್ತದೆ. ಮಹಾರಾಷ್ಟ್ರಕ್ಕೆ ಕೊಟ್ಟಿರತಕ್ಕ 550 ಟಿ.ಎಂ.ಸಿ., ಆಂಧ್ರಕ್ಕೆ ಕೊಟ್ಟಿರತಕ್ಕ 800 ಟಿ.ಎಂ.ಸಿ. ನೀರನ್ನು ಅವರು ಬಳಸಿಕೊಂಡಿದ್ದಾರೆ. ನಾವು 729 ಮತ್ತು ಮಹಾರಾಷ್ಟ್ರದವರು 550 ನಾವಿಬ್ಬರೂ ಸಹಿತ ಇದನ್ನು ಬಳಸಿಕೊಳ್ಳುವುದಕ್ಕೆ ಆಗುವುದಿಲ್ಲ ಅಂದರೆ ಸರ್‌ಪ್ಲಸ್ 320 ಆಗಬಹುದು ಎಂಬ ಅಂದಾಜು ಇದೆ. ಸರ್‌ಪ್ಲಸ್ ವಾಟರ್ ಬಗ್ಗೆ ಸಹಿತ ಮತ್ತೊಂದು ಟ್ರಿಬ್ಯುನಲ್‌ಗೆ ಹಾಕಬೇಕೆಂಬ ಮಾತನ್ನು ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ನಾನು ಹೇಳತಕ್ಕಂಥದ್ದು ಸುಪ್ರೀಂಕೋರ್ಟಿನ ಆದೇಶ ಇವತ್ತು ಅಥವಾ ನಾಳೆ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಬರುತ್ತದೆ. ಈ ಮಧ್ಯದಲ್ಲಿ ನಿನ್ನೆ ಮಧ್ಯಾಹ್ನಕ್ಕೂ ಇವತ್ತಿಗೂ 24 ಗಂಟೆಯಾಗಿದೆ. ಮುಖ್ಯಮಂತ್ರಿಗಳ ಬಗ್ಗೆ ನನಗೆ ವಿಶ್ವಾಸವಿದೆ. ಅವರು ಈಗಾಗಲೇ ತರಿಸಿಕೊಂಡು, ನಮ್ಮ ವಕೀಲರುಗಳ ಜೊತೆಯಲ್ಲೂ ಮಾತನಾಡಿರುತ್ತಾರೆ. ನಮ್ಮ ಅಧಿಕಾರಿಗಳ ಜೊತೆಯಲ್ಲೂ ಮಾತಾನಾಡಿರುತ್ತಾರೆ. ಇದರ ಬಗ್ಗೆ ಸರ್ಕಾರದ ನಿಲುವೇನು? ನಾವು ಅದನ್ನು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ, ನನ್ನ ಅಭಿಪ್ರಾಯದಲ್ಲಿ, it has already given a wrong signal. The Irrigation Minister should not have gone on record or to the press hailing the decision of the Supreme Court. ಎಂದು ಹೇಳತಕ್ಕಂಥ ಅವಶ್ಯಕತೆ ಇರಲಿಲ್ಲ. ಇದನ್ನು ನಾವು ಬುದ್ದಿವಂತಿಕೆಯಿಂದ ಮಾಡಿಕೊಳ್ಳಬೇಕೆಂಬುದು ನಿರ್ಪಾದ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ. ಇದು ರಾಜ್ಯದ ಹಿತ ದೃಷ್ಟಿಯಿಂದ, ಇದರಲ್ಲಿ ರಾಜಕೀಯ ಪ್ರಶ್ನೆಯೇನೂ ಇಲ್ಲ. ಇದರಲ್ಲಿ ನಾವೆಲ್ಲಾ ಒಂದಾಗಿದ್ದೇವೆ. ಒಂದೇ ದೃಷ್ಟಿಯಿಂದ ನಾವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ನನ್ನ ಅಭಿಪ್ರಾಯದಲ್ಲಿ ಸುಪ್ರೀಂಕೋರ್ಟಿನ ತೀರ್ಮಾನದಿಂದ ನಮಗೆ ಸಂಪೂರ್ಣವಾದ ನ್ಯಾಯ ಸಿಕ್ಕಿಲ್ಲ ಎನ್ನತಕ್ಕಂತಾದ್ದು, I would like to go on record.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ

ಸುಪ್ರೀಂಕೋರ್ಟಿನವರು ಏನು ತೀರ್ಪನ್ನು ಕೊಟ್ಟರು, 15-20 ವರ್ಷಗಳಿಂದ ಏನೊಂದು ಡಿಸ್‌ಪ್ಯೂಟ್ ನಡೆಯುತ್ತಾ ಇತ್ತು, ಇವತ್ತು ನಾವು ಒಂದು ಹಂತಕ್ಕೆ ಮುಟ್ಟಿದ್ದೇವೆ ಎನ್ನಬಹುದು. ನಮ್ಮ ನಿಲುವು 524 ಮೀಟರ್ ಎತ್ತರ, ಅಲ್ಲಿಯವರೆಗೆ ನಾವು ಫೈಟ್ ಮಾಡಿದ್ದೇವೆ. ಆಂಧ್ರದ್ದು 509ರಿಂದ 512 ಮಿ.ವರೆಗೆ ಫೈಟ್ ಮಾಡಿದರು. ಇವತ್ತು 519 ಮೀಟರ್‌ವರೆಗೆ ಎತ್ತರಿಸುವುದಕ್ಕೆ ಸುಪ್ರೀಂಕೋರ್ಟಿನವರು ಅನುಮತಿ ಕೊಟ್ಟರು. ಈ ತೀರ್ಪಿನಿಂದ, ಇವತ್ತು ನಮ್ಮ ಹೋರಾಟದ ಹಿನ್ನೆಲೆ ಏನಿದೆ, ಮತ್ತು ನಮ್ಮ ರೈತರ ಹಾಗೂ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವಂಥಾದ್ದು ಏನಿದೆ, 524 ಮೀಟರ್ ಎತ್ತರ ಮಾಡತಕ್ಕ ನಮ್ಮ ನಿಲುವು ಏನಿತ್ತು, ಇದರ ಬಗ್ಗೆ ಸುಪ್ರೀಂಕೋರ್ಟ್‌ನಿಂದ ಪೂರ್ತಿ ತೀರ್ಮಾನ ಬಂದಿದೆ. ಒಂದು ಹಂತದ ಹೋರಾಟಕ್ಕೆ ಒಂದು ರೀತಿಯ ಜಯ ಎಂದು ಹೇಳಬಹುದು. ಆದರೆ, ನಾವು ಅದರಿಂದ ಪೂರ್ತಿ ತೃಪ್ತಿಪಟ್ಟುಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಅದಕ್ಕಾಗಿ, ಆ ಪೂರ್ಣ ಜಡ್ಜ್‌ಮೆಂಟ್ ಕಾಪಿ ಸಿಕ್ಕಿದ ನಂತರ ಏಕೆಂದರೆ, 519 ರಿಂದ 524 ಮೀಟರ್ ಅಂದರೆ 5 ಮೀಟರ್ ವ್ಯತ್ಯಾಸ ಇದೆ. ಅದರ ಬಗ್ಗೆ ಸುಪ್ರೀಂಕೋರ್ಟಿನ ಅಬ್ಸರ್ವೇಷನ್ ಏನಿದೆ, ಅದರ ಬಗ್ಗೆ ಮುಂದೆ ಕೈಗೊಳ್ಳುವಂಥ ಕ್ರಮಗಳ ಬಗ್ಗೆ, ಈಗ ವಾಟರ್ ಟ್ರಿಬ್ಯುನಲ್‌ಗೆ ಅವರು ರೆಫರ್ ಮಾಡಿದ್ದಾರೆ. ವಾಟರ್ ಟ್ರಿಬ್ಯುನಲ್ ಯಾವಾಗ ರಚನೆಯಾಗುತ್ತದೆ, ಅಲ್ಲಿ ಏನಾಗಬಹುದು. ಇದರ ಬಗ್ಗೆಯೂ ಇವತ್ತು ಥಿಂಕಿಂಗ್ ನಡೆಯಬೇಕಾಗುತ್ತದೆ. ಇವತ್ತು ಆಲಮಟ್ಟಿ ವಿಷಯವಾಗಿ ಸುಪ್ರೀಂಕೋರ್ಟ್ ತೀರ್ಪು ಬಂತು, ಅದು ಪೂರ್ಣವಾಗಿ ನಮ್ಮ ಪರವಾಗಿ ಇದೆ ಎನ್ನುವಂಥಾದ್ದು ಅಥವಾ ಪೂರ್ಣವಾಗಿ ನಮಗೆ ತೃಪ್ತಿಯಾಗಿದೆ ಎನ್ನುವಂಥಾದ್ದು, ಈ ಮಾತು ಬೇಡ ಎಂಬುದು ನನ್ನ ಅಭಿಪ್ರಾಯ. ಅದರ ಬದಲಿಗೆ ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಅವಶ್ಯ. ನಿನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಎಲ್ಲಾ ವಿರೋಧಪಕ್ಷದ ನಾಯಕರುಗಳ ಜೊತೆ ಚರ್ಚೆ ಮಾಡಿ ಇದರ ಬಗ್ಗೆ ಒಂದು ತೀರ್ಮಾನ ಕೈಗೊಳ್ಳೋಣ ಎಂದು. ಅದರಲ್ಲಿ ನೀರಾವರಿ ತಜ್ಞರು ಇರಬಹುದು, ನಮ್ಮ ನ್ಯಾಯವಾದಿಗಳು ಇರಬಹುದು, ಎಲ್ಲರೂ ಸೇರಿ ಚರ್ಚೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದನ್ನು ಅವರು ಮಾಡಲಿ. ಆ ಜಡ್ಜ್‌ಮೆಂಟ್ ಕಾಪಿ ಬಂದ ತಕ್ಷಣ ನಾವು ಆ ಬಗ್ಗೆ ಚಿಂತನೆಯನ್ನು ಮಾಡೋಣ. ಇಂತಹ ಒಂದು ಸನ್ನಿವೇಶದಲ್ಲಿ ನಾವು ಈ ಒಂದು ತೀರ್ಮಾನದ ಬಗ್ಗೆ ಹೆಚ್ಚು ರಿಆಕ್ಷನ್ ಕೊಡುವುದಕ್ಕಿಂತ ಮುಂಚಿತವಾಗಿ, ನಾವೆಲ್ಲ ಕೂಡಿಕೊಂಡು ಮುಂದೆ ಏನು ಮಾಡಬೇಕೆಂದು ರಾಜ್ಯ ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗುವುದಕ್ಕೆ ಮತ್ತು ನಮ್ಮ ರಾಜ್ಯದ ರೈತರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗುವುದಕ್ಕೆ ಏನು ತೀರ್ಮಾನ ತೆಗೆದುಕೊಳ್ಳಬೇಕೋ ಆ ತೀರ್ಮಾನದ ಬಗ್ಗೆ ನಮ್ಮ ಎಲ್ಲಾ ಪಕ್ಷಗಳಲ್ಲಿ ಒಗ್ಗಟ್ಟು ಇರಲಿ. ನಮ್ಮ ಎಲ್ಲಾ ರಾಜಕೀಯ ಪಕ್ಷದವರು ಸಹ ಈ ಒಂದು ವಿಷಯದಲ್ಲಿ ಯಾವುದೇ ಒಂದು ಭಿನ್ನಾಭಿಪ್ರಾಯ ಇದ್ದರೂ ಸಹ ಅದನ್ನು ಮರೆತು ರಾಜ್ಯದ ಹಿತಾಸಕ್ತಿಯನ್ನು

ಕಾಪಾಡಿಕೊಳ್ಳುವ ಸಲುವಾಗಿ ನಮ್ಮಲ್ಲಿ ಒಗ್ಗಟ್ಟು ಇರಬೇಕು. ನಾವು ಇಲ್ಲಿ ಒಂದು ಸರ್ವಾನುಮತದ ತೀರ್ಮಾನವನ್ನು ತೆಗೆದುಕೊಂಡು ಮತ್ತು 524 ಮೋಟರ್ ಎತ್ತರವನ್ನು ಮಾಡಲು ನಾವು ಯಾವ ರೀತಿಯ ಒಂದು ಹೋರಾಟವನ್ನು ಮುಂದುವರಿಸಬೇಕು ಆ ಹೋರಾಟ ಕಾನೂನು ಪ್ರಕಾರ ಮಾಡಬೇಕೋ ಅಥವಾ ರಾಜಕೀಯವಾಗಿ ಮಾಡಬೇಕೋ ಎನ್ನುವ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ನಿಲುವನ್ನು ಸ್ಪಷ್ಟ ಮಾಡಿದರೆ ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಸಿ.ಭೈರೇಗೌಡ:(ವೇಮಗಲ್) ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮೆಲ್ಲರನ್ನೂ ಚಿಂತೆಗೆ ಈಡುಮಾಡಿರತಕ್ಕಂಥಾದ್ದು ಮಾನ್ಯ ಭಾರಿ ನೀರಾವರಿ ಸಚಿವರು ಹೇಳಿರತಕ್ಕಂತಾ ಹೇಳಿಕೆ. ಅವರು ವಿರೋಧಪಕ್ಷದಲ್ಲಿದ್ದಾಗ ಒಂದು ದೊಡ್ಡ ಗ್ರಂಥವನ್ನೇ ಬರೆದು ಇಟ್ಟು ಹೋಗಿದ್ದಾರೆ. ''ಕೃಷ್ಣೆಯ ಕಣ್ಣೀರು'' ಎನ್ನತಕ್ಕಂಥ ಒಂದು ದೊಡ್ಡ ಗ್ರಂಥವನ್ನು ಬರೆದು ಇಟ್ಟು ಹೋಗಿ, ಹಿಂದಿನ ಸರ್ಕಾರಗಳು ಏನೇನು ಮಾಡಿದರು, ಅದರಲ್ಲೂ ನಮ್ಮ ಸರ್ಕಾರ ಏನೂ ಮಾಡಲಿಲ್ಲ ಎನ್ನತಕ್ಕಂಥ ರೀತಿಯಲ್ಲಿ ತಮ್ಮ ಸಾಹಿತ್ಯ ಪ್ರದರ್ಶನವನ್ನು ಮಾನ್ಯ ಹೆಚ್.ಕೆ.ಪಾಟೀಲರು ಮಾಡಿದ್ದಾರೆ. ಈ ವಿಷಯ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಉತ್ತರ ಕೊಡುತ್ತಿರುವಂತಹ ಸಂದರ್ಭದಲ್ಲಿಯೇ ಪ್ರಸ್ತಾಪವಾಯಿತು. ಅವರ ಹೇಳಿಕೆ ಏನೆಂದರೆ ಎಲ್ಲರನ್ನು ಕರೆದು ಮಾತನಾಡುತ್ತೇನೆಂದು ಹೇಳಿದರು, ಏಕೆಂದರೆ ಯಾವತ್ತೂ ಸಹ ಈ ವಿಷಯದಲ್ಲಿ ಸರ್ವಸಮ್ಮತವಾದ ಅಭಿಪ್ರಾಯ ಈ ರಾಜ್ಯದಲ್ಲಿ ಇತ್ತೇ ವಿನಹಃ ಪಕ್ಷಗಳು ಮತ್ತು ಆಡಳಿತ ಪಕ್ಷಗಳು ಬದಲಾವಣೆಯಾದರೆ ರಾಜ್ಯದ ಒಟ್ಟಾರೆ ಕೆಲವು ಸಮಸ್ಯೆಗಳ ಬಗ್ಗೆ ಅಭಿಪ್ರಾಯಗಳು ಇದುವರೆಗೂ ಬದಲಾವಣೆ ಕಂಡಿರಲಿಲ್ಲ. ಯಾರೇ ಆಡಳಿತ ಪಕ್ಷದಲ್ಲಿ ಇರಲಿ. ಅದಕ್ಕೆ ನಾವೆಲ್ಲರೂ ಸಹ ಈಗಲೂ ಕಟ್ಟುಬಿದ್ದಿದ್ದೇವೆ. ಆದ್ದರಿಂದ ತಕ್ಷಣ ಈ ಬಗ್ಗೆ ಚರ್ಚೆ ಮಾಡಲು ಒಂದು ಸಭೆಯನ್ನು ಕರೆಯಬೇಕೆಂದು ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದರು. ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮನ್ನು ಚಿಂತೆಗೆ ಈಡು ಮಾಡಿರತಕ್ಕಂಥ ವಿಚಾರ ಏನೆಂದರೆ ಎರಡೂ ಸದನಗಳು ನಡೆಯುತ್ತಾ ಇರತಕ್ಕಂಥ ಸಂದರ್ಭದಲ್ಲಿ ಮಾನ್ಯ ಭಾರೀ ನೀರಾವರಿ ಸಚಿವರು ಎರಡೂ ಸದನಗಳ ಹೊರಗೆ ಪತ್ರಿಕಾಕರ್ತರಿಗೆ ಹೇಳಿಕೆ ನೀಡಿ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಇದು ಈ ಸದನದ ಮತ್ತು ಮತ್ತೊಂದು ಸದನದ ಹಕ್ಕುಚ್ಯುತಿಯಾಗುತ್ತದೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಸರ್ಕಾರದ ನಿಲುವು ಏನಿದ್ದರೂ ಸಹ ಅದು ಈ ಸದನದ ಒಳಗೆ ಆಗಬೇಕೇ ವಿನಹ ಈ ಸದನ ಬಿಟ್ಟು ಹೊರಗಡೆ ಆಗತಕ್ಕಂಥಾದ್ದು ಅಲ್ಲ. ಆದ್ದರಿಂದ ಅವರು ಈ ಸದನದ ಹಕ್ಕುಚ್ಯುತಿ ಮಾಡಿದ್ದಾರೆ. ಮತ್ತು ಅವರು ಇನ್ನೂ ಮುಂದೆ ಹೋಗಿ ಏನು ಹೇಳುತ್ತಾರೆ ಅಂದರೆ ಈಗಾಗಲೇ ಅವರು ಸರ್ಕಾರದ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಎರಡನೇ ಟ್ರಿಬ್ಯುನಲ್ ಅನ್ನು ಮಾಡಬೇಕಾದಂತಹ

ಅವಶ್ಯಕತೆ ಇರುವುದರ ಬಗ್ಗೆ ಒಪ್ಪಿಗೆಯನ್ನು ಸಹ ಕೊಟ್ಟಿದ್ದಾರೆ. ನಾನು ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟ್‌ನ್ನು ಅರ್ಥ ಮಾಡಿಕೊಂಡಿರುವ ಹಾಗೆ the affected state must demand for a tribunal. ಯಾರಾದರೂ ಕೂಡ ಅಫೆಕ್ಟೆ ಆಗತಕ್ಕಂಥ ರಾಜ್ಯಗಳವರು ಈ ಟ್ರಿಬ್ಯುನಲ್ ಅನ್ನು ರಚನೆ ಮಾಡಬೇಕೆಂದು ಕೇಳತಕ್ಕಂಥಾದ್ದು, ಇವತ್ತು ಎರಡನೇ ಟ್ರಿಬುನಲ್‌ನಿಂದ ಮಹತ್ತರವಾದ ಇಂಪ್ಲಿಕೇಷನ್ ಕರ್ನಾಟಕದ ಬಗ್ಗೆ ಆಗುವುದು ಇದೆ; ನಮ್ಮ ಎರಡನೇ ಟ್ರಿಬ್ಯುನಲ್ ರಚನೆ ಆದರೆ, ಕಾವೇರಿ ನದಿಯ ಬಗ್ಗೆ ಟ್ರಿಬ್ಯುನಲ್ ರಚನೆ ಮಾಡಬೇಕೆನ್ನುವ ತಮಿಳುನಾಡಿನ ಬೇಡಿಕೆ ಸರಿ ಸುಮಾರು 20-25 ವರ್ಷಗಳಿಂದ ಇದ್ದರೂ ಸಹ ಆ ಟ್ರಿಬ್ಯುನಲ್‌ನ್ನು ರಚನೆ ಮಾಡಲು ನಮ್ಮ ಸಹಮತ ಇರಲಿಲ್ಲ ಮತ್ತು ನಮ್ಮ ಒಪ್ಪಿಗೆ ಇರಲಿಲ್ಲ. ಇವತ್ತು ಎರಡನೇ ಟ್ರಿಬ್ಯುನಲ್‌ನ್ನು ರಚನೆ ಮಾಡತಕ್ಕಂತಾದ್ದಕ್ಕೆ ಮುಂದಾಗಿರತಕ್ಕಂಥಾದ್ದು, ಅದರ ಇಂಪ್ಲಿಕೇಶನ್ ಅನ್ನು ನಾವು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿರತಕ್ಕಂಥಾದ್ದು, ನಮ್ಮ ರಾಜ್ಯದ ಹಿತಕ್ಕೆ ಯಾವ ರೀತಿಯಲ್ಲಿ ಧಕ್ಕೆ ಬರುತ್ತದೆ ಎನ್ನತಕ್ಕಂಥಾದ್ದನ್ನು ಅರ್ಥ ಮಾಡಿಕೊಳ್ಳದೇ ಇವತ್ತು ಎರಡನೇ ಟ್ರಿಬ್ಯುನಲ್‌ಗೆ ಸರ್ಕಾರ ಇನ್‌ಪ್ರಿನ್ಸಿಪಲ್ ಒಪ್ಪಿಕೊಳ್ಳುತ್ತಿದೆ. ಭಾರೀ ನೀರಾವರಿ ಸಚಿವರ ಹೇಳಿಕೆ ಇದು ಸರ್ಕಾರದ ನಿಲುವೇ? ಈ ರೀತಿಯಾದಂತಹ ನಿಲುವನ್ನು ಅದೂ ಎರಡು ಸದನಗಳು ನಡೆಯುತ್ತಿರುವ ಸಂದರ್ಭದಲ್ಲಿ ಹೊರಗಡೆ ಸ್ಟೇಟ್‌ಮೆಂಟ್ ಮಾಡಿರತಕ್ಕಂಥ ಇದು ಈ ಸದನದ ಹಕ್ಕಿಗೆ ಚ್ಯುತಿ ಬಂದಿರತಕ್ಕಂಥಾದ್ದು, ಈ ಬಗ್ಗೆ ಸರ್ಕಾರ ಸ್ಪಷ್ಟಣೆ ನೀಡಬೇಕು. ಈ ಟ್ರಿಬ್ಯುನಲ್ ಅನ್ನು ರಚನೆ ಮಾಡತಕ್ಕಂಥಾದ್ದಕ್ಕೆ ಈ ಸರ್ಕಾರದ ಒಪ್ಪಿಗೆ ಇದೆಯೇ? ಒಪ್ಪಿಗೆ ಇದ್ದರೆ ನಮ್ಮನ್ನು ಕೇಳುವಂತಹ ಅವಶ್ಯಕತೆ ಇಲ್ಲ, ನೀವೇ ತೀರ್ಮಾನ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಆನಿಸಿಕೆ ಏನು ಇದೆ ಎನ್ನತಕ್ಕಂಥಾದ್ದನ್ನು ಸರ್ಕಾರಕ್ಕೆ ಹೇಳಬೇಕಾಗುತ್ತದೆ. ನಾವ್ಯಾರು ಇದರಲ್ಲಿ ಭಾಗಿಯಾಗಬೇಕಾಗಿರತಕ್ಕಂಥ ಅವಶ್ಯಕತೆ ಇಲ್ಲ ಎನ್ನತಕ್ಕಂಥಾದ್ದು ಸರ್ಕಾರದ ಅಭಿಪ್ರಾಯವೇ? ಈ ರೀತಿಯಲ್ಲಿ ವಿರೋಧಪಕ್ಷಗಳನ್ನು ಉಪೇಕ್ಷೆಗೆ ಒಳಪಡಿಸತಕ್ಕಂಥಾದ್ದು ಸರಿಯಲ್ಲ. ಇದು ಮೊದಲನೇ ಸಾರಿ ನಡೆಯುತ್ತಿದೆ. ಇದು ಖಂಡನೀಯ ಎನ್ನತಕ್ಕಂಥ ಮಾತನ್ನು ಸರ್ಕಾರಕ್ಕೆ ಹೇಳಿ ಇವತ್ತು ಎರಡನೇ ಟ್ರಿಬ್ಯುನಲ್‌ಗೆ ತಾವು ತಾತ್ವಿಕವಾದಂತಹ ಒಪ್ಪಿಗೆಯನ್ನು ಕೊಟ್ಟಿದ್ದೀರಾ? ಇದರ ವಿವರಗಳನ್ನು ಇವತ್ತು ತಾವು ಪಡೆಯದೇ, ಬಹಳ ಸಂತೋಷವಾಗಿದೆ ಬಹಳ ಖುಷಿಯಾಗಿದೆ ಎಂದು ಹೇಳಿ ಕೃಷ್ಣೆಯ ಕಣ್ಣೀರನ್ನೊರೆಸಿರತಕ್ಕಂಥದ್ದರ ಬಗ್ಗೆ ಮಾನ್ಯ ಭಾರೀ ನೀರಾವರಿ ಸಚಿವರು ಹೇಳಿಕೆಯನ್ನು ಕೊಟ್ಟಿರತಕ್ಕಂಥಾದ್ದು ಈ ರಾಜ್ಯಕ್ಕೆ ಆಘಾತವಾಗಿದೆ. ಎನ್ನತಕ್ಕಂಥಾದ್ದು ನಮ್ಮ ಅಭಿಪ್ರಾಯ. ಈ ಬಗ್ಗೆ ಸರ್ಕಾರ ಹೇಳಿಕೆ ನೀಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

+ ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ

ತಾನೇ ಹೇಳಿದೆ, ಸುಪ್ರೀಂ ಕೋರ್ಟ್‌ನ ತೀರ್ಮಾನ ಬಂದಿದೆ. ಅದರ ಡಿಟೇಲ್ಸ್‌ನ್ನು ನಾವು ಕಾದು ನೋಡಬೇಕಾಗಿದೆ. ಜಸ್ಟೀಸ್ ಸೇರಿಯವರು, ತೀರ್ಮಾನವನ್ನು ಓದಿದ ಮೇಲೆ ಕೆಲವು ಕರೆಕ್ಷನ್ಸ್ ಆಗಬೇಕು. ಆದ್ದರಿಂದ ಆ ಜಡ್ಜಮೆಂಟ್ ಕಾಪಿಯನ್ನು ಇವತ್ತು ಕೊಡುವುದಕ್ಕೆ ಆಗುವುದಿಲ್ಲ. ಕರೆಕ್ಷನ್ಸ್ ಮಾಡಿದ ಮೇಲೆ ಆ ಜಡ್ಜಮೆಂಟ್ ಕಾಪಿಯನ್ನು ಕೊಡುತ್ತಾರೆ ಎಂದು ಹೇಳಿದರು. ನಿನ್ನೆ ರಾತ್ರಿಯವರೆಗೂ ನಮಗ ಜಡ್ಜಮೆಂಟ್ ಕಾಪಿ ಬಂದಿರಲಿಲ್ಲ. ಇವತ್ತು ಜಡ್ಜಮೆಂಟ್ ಕಾಪಿ ನಮ್ಮ ಲಾಯರ್‌ಗಳಿಗೆ ಸಿಗುತ್ತದೆ ಎಂದು ನಾವು ನಿರೀಕ್ಷೆ ಮಾಡಿದ್ದೇವೆ. ಇದು ಮುಂದುವರಿದಿರತಕ್ಕಂಥ ಸಮಸ್ಯೆ. ನಾನು ಸೂಕ್ಷ್ಮವಾಗಿ ನಿನ್ನೆ ಹೇಳಿದೆ. ಇಲವಾರು ಜಟಿಲವಾದ ಪ್ರಶ್ನೆಗಳನ್ನು ನಾವು ಮುಂದಿನ ದಿನಗಳಲ್ಲಿ ಎದುರಿಸಬೇಕಾಗುತ್ತದೆಂದು. ಮತ್ತು ಇದರಲ್ಲಿ ಕೇವಲ ಸರ್ಕಾರ ನಿರ್ಣಯ ಮಾಡತಕ್ಕಂಥ ವಿಚಾರ ಅಲ್ಲ. ಒಟ್ಟು ಕಾನ್‌ಸನ್‌ಸೀವ್ಸ್‌ನ್ನು ನಾವು ರೂಪಣೆ ಮಾಡಬೇಕಾಗಿರತಕ್ಕಂಥಾದ್ದು ಬಹಳ ಅವಶ್ಯಕ ಎನ್ನತಕ್ಕಂಥಾದ್ದನ್ನು ಗಮನಿಸಿ, ವಿರೋಧಪಕ್ಷದ ಎಲ್ಲಾ ನಾಯಕರುಗಳನ್ನು ಮತ್ತು ಇದರ ಬಗ್ಗೆ ಆಸಕ್ತಿ ಇರುವ ಎಲ್ಲಾ ಪರಿಣಿತರನ್ನು ಕರೆದು ನಾವು ಅವರ ಜೊತೆಯಲ್ಲಿ ಸಮಾಲೋಚನೆಗಳನ್ನು ಮಾಡಿ ಆ ನಂತರ ಒಂದು ನಿಲುವನ್ನು ತೆಗೆದುಕೊಳ್ಳಬೇಕು.

ದಿನಾಂಕ 28-4-2000 ದಂದು ಮಧ್ಯಾಹ್ನ 4-00 ಗಂಟೆಗೆ ಒಂದು ಸಭೆ ಸೇರಿಸಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ವಸ್ತು ಸ್ಥಿತಿಯಲ್ಲಿ ಏನು ಬದಲಾವಣೆ ಆಗಿದೆ ಅಂದರೆ, ಆಲಮಟ್ಟಿ ರಿಜರ್ವಾಯರ್ ಏನು ಇದೆ ಅದನ್ನು ಮುಂದುವರಿಸಬಾರದು ಎನ್ನತಕ್ಕಂಥ ಸ್ಟೇ ಆರ್ಡರ್ ಏನಿತ್ತು ಅದು ಈಗ ವೆಕೇಟ್ ಆಗಿದೆ. ಎರಡನೆಯದು ಕರ್ನಾಟಕ ರಾಜ್ಯ ಸುಪ್ರೀಂ ಕೋರ್ಟ್‌ನಲ್ಲಿ ಏನು ವಾದ ಮಂಡಿಸಿತ್ತು ಆ ವಾದದ ಅತ್ಯಂತ ಪ್ರಾಮುಖ್ಯವಾದ ಭಾಗ ಯಾವುದು ಎಂದು ಹೇಳಿದರೆ, ಆಲಮಟ್ಟಿ ಜಲಾಶಯದಲ್ಲಿ ನಾವು 173 ಟಿ.ಎಂ.ಸಿ. ನೀರನ್ನು ಶೇಖರಣೆ ಮಾಡತಕ್ಕಂಥ ಸಾಮರ್ಥ್ಯಕ್ಕೆ ಯಾವುದೇ ಪಿಧವಾದ ಕುಂದು ಬರಬಾರದು ಎನ್ನತಕ್ಕಂಥಾದ್ದನ್ನು ನಾವು ಪ್ರತಿಪಾದನೆ ಮಾಡಿದಂಥ ಪ್ರಮುಖವಾದ ಒಂದು ಅಂಶ. ಅದನ್ನು ಸುಪ್ರೀಂ ಕೋರ್ಟ್‌ನವರು ಒತ್ತಿ ಹಿಡಿದಿದ್ದಾರೆ. ಈಗ ಮಾನ್ಯ ನೀರಾವರಿ ಸಚಿವರು ಒಂದು ಹೇಳಿಕೆಯನ್ನು ಪತ್ರಿಕೆಗಳಲ್ಲಿ ಕೊಟ್ಟಿದ್ದಾರೆಂದು ಹೇಳಿದರು. ಅವರು ಏನು ಹೇಳಿದ್ದಾರೆ? 524 ಮೀಟರ್‌ಗಳಿಗೆ ಏರಿಸಲು ಹೋರಾಟ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೆ ಯಾರಿಗೂ ತಕರಾರು ಇರಬಾರದು. ನಾವು ಹೋರಾಟ ಮಾಡಲೇಬೇಕಾಗುತ್ತದೆ. 524 ಮೀಟರ್‌ಗಳಿಗೆ ಏರಿಸಲು ಹೋರಾಟ ಮಾಡಲಿಕ್ಕೆ ಇರತಕ್ಕಂಥಾದ್ದೇ ಇವತ್ತು ಸಭೆಯಲ್ಲಿ ಇರತಕ್ಕಂಥ ಮುಖ್ಯವಾದ ಪ್ರಶ್ನೆ. ಇದನ್ನು ಅವರು ಹೇಳಿದ್ದಾರೆ.

ಇವೊತ್ತು ಅದು ಸದನವನ್ನು ಆಕರ್ಷಿಸಿರತಕ್ಕಂಥ ಪ್ರಶ್ನೆ. ಅದನ್ನು ಅವರು ಹೇಳಿದ್ದಾರೆ. ಅವರು ಮುಂದುವರೆದು ಹೇಳುತ್ತಾರೆ, 519ಮೀಟರ್ ಎತ್ತರಕ್ಕೆ ನಾವು 173 ಟಿಎಂಸಿಯಷ್ಟು ನೀರನ್ನು ಶೇಖರಿಸಬಹುದು ಎಂದು ಹೇಳಿದ್ದಾರೆ. ಆದ್ದರಿಂದ ಮೂಲಭೂತವಾದ ಧೋರಣೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ. ನಮ್ಮ ಆಂಧ್ರಪ್ರದೇಶದ ಮಾನ್ಯ ಮುಖ್ಯಮಂತ್ರಿಯವರು ಮಹಾಥ್ರಿಲ್ ಆಗಿಬಿಟ್ಟಿದ್ದಾರೆ. ಏಕೆಂದರೆ ಸುಪ್ರೀಂಕೋರ್ಟ್‌ನವರು ಹೇಳಿದ್ದಾರೆ, ನಿಮಗೆ ಯಾವ ವಿಧವಾದಂಥ ಹಕ್ಕೂ ಇಲ್ಲ ಸರ್‌ಪ್ಲಸ್ ವಾಟರ್ ವಿಚಾರದಲ್ಲಿ, ಅದನ್ನು ಸಂಬಂಧಪಟ್ಟಂಥ ಕೇಂದ್ರ ನೀರಾವರಿ ಇಲಾಖೆಯವರು ಕೂಡ ವಾಟರ್ ರಿಸೋರ್ಸ್ ಮಿನಿಸ್ಟ್ರಿಯವರು ಕೂಡ ಇದನ್ನು ಗಮನಿಸಬೇಕು ಎಂಬ ಅಡಿಶನಲ್ ವಾರ್ನಿಂಗನ್ನು ಕೂಡ ಕೊಟ್ಟಿದ್ದಾರೆ. ಇದರಿಂದ ಆಂಧ್ರಪ್ರದೇಶದವರಿಗೆ ಥ್ರಿಲ್ ಆಗಿದ್ದರೆ, ಅದಕ್ಕೆ ನಮ್ಮ ಅಬ್ಜಕ್ಷನ್ ಏನೂ ಇಲ್ಲ. ಈ ಸುಪ್ರೀಂಕೋರ್ಟ್‌ನ ತೀರ್ಮಾನ ನಮಗೆ ಏನಾಗಿದೆ ಅಂದರೆ... ಈಕ್ವಲ್ ಡಿಸ್‌ಪ್ಲೆಸರ್ ಎನ್ನುವ ಹಾಗೆ ಆಗಿದೆ. ಅದು ಎಲ್ಲಾ ರಾಜ್ಯಗಳಲ್ಲಿಯೂ ಕೂಡ. ಇದನ್ನು ನಮ್ಮ ಮಟ್ಟಿಗೆ ಹೇಳುವುದಾದರೆ, ಸೀಮಿತವಾದ ದೃಷ್ಟಿಯಲ್ಲಿ ಹೇಳುವುದಾದರೆ, ನಾವು ಈ ಆಲಮಟ್ಟಿ ಜಲಾಶಯದ ಮೇಲೆ ಅಗಾಧವಾದಂಥ ಸಂಪನ್ಮೂಲವನ್ನು ಹಾಕಿದ್ದೇವೆ. ಆ ಸಂಪನ್ಮೂಲಗಳನ್ನು ಜೀರ್ಣಿಸಿಕೊಳ್ಳುವುದಕ್ಕೆ ಸುಪ್ರೀಂ ಕೋರ್ಟ್ ಒಂದು ಮಾರ್ಗವನ್ನು ತೋರಿಸಿಕೊಟ್ಟಿದೆ ಎಂಬ ಲಿಮಿಟೆಡ್ ಸಮಾಧಾನ ನಮ್ಮದಾಗಿದೆ. ಮುಂದೆ ಏನು ಮಾಡಬೇಕೆಂಬುದು ನಮ್ಮ ಮುಂದಿದೆ. ಈ 524ರ ಗುರಿ ಏನು ನಮ್ಮ ಮುಂದಿದೆ ಅದನ್ನು ಮುಟ್ಟಲು ಯಾವ ರಸ್ತೆಯ ಮೂಲಕ, ಯಾವ ಮಾರ್ಗದ ಮೂಲಕ ಹೋಗಬೇಕು, ಯಾವ ಮಾರ್ಗವನ್ನು ಅವಲಂಬಿಸಬೇಕು ಎನ್ನುವಂಥಾದ್ದರ ಕುರಿತು 28ನೇ ತಾರೀಖಿನಂದು ನಾವು, ನೀವುಗಳೆಲ್ಲರೂ ಕುಳಿತಾಗ ಅದರ ಬಗ್ಗೆ ಚರ್ಚೆ ಮಾಡೋಣ. ಈ ಸರಕಾರ ಮಾಡಿರತಕ್ಕಂಥಾದ್ದು ಏನಿಲ್ಲ. ಕಾರಣ ಅಂದರೆ ಹಿಂದಿನ ಸರಕಾರದವರು ಮಾಡಿದ್ದಾರೆ. ಇದು ಕಂಟಿನ್ಯೂಯಿಂಗ್ ಪ್ರೋಸೆಸ್. ಯಾವ ಲಾಯರ್‌ಗಳನ್ನು ಹಿಂದಿನಿಂದ ಇಟ್ಟಕೊಂಡು ಬಂದಿದ್ದರೋ ಅದೇ ಲಾಯರ್‌ಗಳನ್ನು ಮುಂದುವರೆಸಿಕೊಂಡು ಬಂದಿದ್ದೇವೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಭಾರಿ ನೀರಾವರಿ ಸಚಿವರು ಟ್ರಿಬ್ಯೂನಲ್ ಬಗ್ಗೆ ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ನಾವು ಖಚಿತವಾದಂಥ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. Is it not a Government statement..?

ಶ್ರೀ ಎಸ್.ಎಂ.ಕೃಷ್ಣ: ನಿಮ್ಮೆಲ್ಲರನ್ನೂ ಕನ್‌ಸಲ್ಟ್ ಮಾಡಿದ ಮೇಲೆಯೇ ಸರಕಾರವು ಒಂದು ಖಚಿತವಾದಂಥ ನಿಲುವನ್ನು ತೆಗೆದುಕೊಳ್ಳುತ್ತದೆ. That will become the Government statement.

ಶ್ರೀ ಭೈರೇಗೌಡ: ಮಾನ್ಯ ಭಾರಿ ನೀರಾವರಿ ಸಚಿವರು ಹೇಳಿರತಕ್ಕಂಥಾದ್ದು ಸರಕಾರದ ಸ್ಟೇಟ್‌ಮೆಂಟ್ ಆಗುತ್ತದೆಯೇ?

ಶ್ರೀ ಎಸ್.ಎಂ.ಕೃಷ್ಣ: ನೀವು ನಾವು ಒಟ್ಟಿಗೆ ಸೇರಿ ಏನು ಸ್ಟೇಟ್‌ಮೆಂಟ್ ಮಾಡಬೇಕೋ ಅದನ್ನು ಮಾಡೋಣ. ಆ ಮೇಲೆ, ಅದು ಸರಕಾರದ ಸ್ಟೇಟ್‌ಮೆಂಟ್ ಆಗುತ್ತದೆ.

4. ಗಮನ ಸೆಳೆಯುವ ಸೂಚನೆ

ಬೆಂಗಳೂರು ನಗರದಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಯ ನಿಷೇಧ.

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ): ಸನ್ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ನಿಷೇಧಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು): ಬೆಂಗಳೂರು ನಗರದಲ್ಲಿ ಪ್ರಮುಖವಾಗಿ ಜನರು ಪ್ಲಾಸ್ಟಿಕ್ ಚೀಲಗಳನ್ನು ಹೆಚ್ಚು ಹೆಚ್ಚಾಗಿ ದಿನೇ ದಿನೇ ಉಪಯೋಗಿಸುತ್ತಿರುವುದರಿಂದ ಹಾಗೂ ಈ ಚೀಲಗಳನ್ನು ನಗರಪಾಲಿಕೆಯ ಕಸದ ವಿಲೇವಾರಿ ಮತ್ತು ಶೇಖರಣೆ ಸಲುವಾಗಿ ಇಟ್ಟಿರುವ ತೊಟ್ಟಿಗಳಿಗೆ ಸರಿಯಾಗಿ ಹಾಕದೆ ಇರುವುದರಿಂದ ಆ ಚೀಲಗಳು ಚರಂಡಿ ಸೇರಿ ಮಳೆ ನೀರು ಸರಿಯಾಗಿ ಹರಿಯದೆ ಒಳಚರಂಡಿಗಳು ಕಟ್ಟಿಕೊಳ್ಳುತ್ತಿದ್ದು, ಕಾಲಕಾಲಕ್ಕೆ ಇವುಗಳನ್ನು ತೆಗೆಯಲು ಕ್ರಮ ವಹಿಸಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಸವನ್ನು ಆಯಾ ದಿನವೇ ಸಾಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಉತ್ಪತ್ತಿಯಾದ ಕಸಕ್ಕೆ ಬೆಂಕಿ ಇಡದಂತೆ ಸೂಕ್ತ ನಿಗಾ ಇಡುವಂತೆ ಆಯಾ ಬಡಾವಣೆಯಲ್ಲಿನ ನಗರಪಾಲಿಕೆಯ ಸಿಬ್ಬಂದಿಗೆ ತಿಳಿಸಲಾಗಿದೆ ಮತ್ತು ಈ ಬಗ್ಗೆ ತಪಾಸಣೆಯನ್ನು ಸಹ ನಡೆಸಲಾಗುತ್ತಿದೆ.

ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ನಿಷೇಧಿಸುವ ಅಥವಾ ಮುಂದುವರಿಸಿಕೊಂಡು ಹೋಗುವ ಬಗ್ಗೆ ಸಾಧಕ ಭಾಧಕಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಕಾನೂನಿನಡಿಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ದಿನೇಶ್ ಗುಂಡುರಾವ್: ಮಾನ್ಯ ಅಧ್ಯಕ್ಷರೇ, ಕೇಂದ್ರದಲ್ಲಿ ಈ ಕುರಿತು ಒಂದು ಕಾನೂನು ಇದೆ. ಪುನರ್ ಬಳಕೆಯ ಪ್ಲಾಸ್ಟಿಕ್‌ನ್ನು ಉಪಯೋಗಿಸಬಾರದು, ಅದರಿಂದ ಆಗತಕ್ಕಂಥ ದುಷ್ಪರಿಣಾಮಗಳು ಅದರಲ್ಲೂ ವಿಶೇಷವಾಗಿ ಆಹಾರಪದಾರ್ಥಗಳು